ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ೦ಃ 05.04.2025

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವಾ ಸ್ವತ್ತು ನನಗೆ ಮೀನುಗಾರಿಕೆ ಇಲಾಖೆಯಿಂದ ಮಂಜೂರಾಗಿರುವ ಸ್ವತ್ತು ಇರುತ್ತದೆ. ದಾವಾ ಸ್ವತ್ತು ನನ್ನ ಹೆಸರಿಗೆ ಖಾತೆಯಾಗಿ ಸುಮಾರು 3-4 ವರ್ಷ ಆಗಿರಬಹುದು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ನಾನು ಸುಮಾರು 15 ವರ್ಷಗಳಿಂದ ಕಟ್ಟುತ್ತಿದ್ದೇನೆ. ಕಂದಾಯವನ್ನು ನಾನೇ ಪಾವತಿ ಮಾಡಿರುತ್ತೇನೆ. ಮೀನುಗಾರಿಕೆ ಇಲಾಖೆಯಿಂದ ನಮಗೆ ಹಕ್ಕು ಪತ್ರವನ್ನು ನೀಡಿರುತ್ತಾರೆ. ಮೊದಲಿಗೆ ನಾವು ಶೆಡ್ ನಲ್ಲಿ ವಾಸ ಮಾಡುತ್ತಿದ್ದ ಕಾರಣ ಸದರಿ ಹಕ್ಕು ಪತ್ರವು ಹಾಳಾಗಿರುತ್ತದೆ. ನಾವು ಸುಮಾರು 20 ವರ್ಷಗಳ ಹಿಂದೆ ಶೆಡ್ ನಲ್ಲಿ ವಾಸ ಮಾಡುತ್ತಿದ್ದ ಸಂದರ್ಬದಲ್ಲಿ ಹಕ್ಕು ಪತ್ರವು ಹಾಳಾಗಿರುತ್ತದೆ. ಸದರಿ ಹಕ್ಕು ಪತ್ರದ ಜೆರಾಕ್ಸ್ ಪ್ರತಿ ನನ್ನ ಬಳಿ ಇರುತ್ತದೆ. ಹಕ್ಕು ಪತ್ರದಲ್ಲಿ ನಮೂದು ಇರುವ ನಿವೇಶನದ ಸಂಖ್ಯೆ 69 ಇರುತ್ತದೆ. ನಿಪಿ.1 ರಿಂದ 7 ದಾಖಲೆಗಳನ್ನು ಸಾಕ್ಷಿಗೆ ತೋರಿಸ, ಅದರಲ್ಲಿರುವ ಸ್ವತ್ತಿನ ಸಂಖ್ಯೆ 63 ಅನ್ನು 69 ಎಂದು ತಿದ್ದಿರಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.9 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಸ್ವತ್ತಿನ ಭಾವ ಚಿತ್ರದಲ್ಲಿ ಶೀಟಿನ ಮನೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸ್ವಲ್ಪ ಜಾಗವನ್ನು ಬಿಟ್ಟುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆಸ್ತಿ ಸಂಖ್ಯೆ F-69 ಎಂದು ಪುರಸಭೆಯಿಂದ ಹಕ್ಕು ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ F -63 ನಿಮಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಿಮಗೆ ಆಸ್ತಿ ಸಂಖ್ಯೆ F -63 ಮಂಜೂರಾಗಿದ್ದರೂ ಸಹಾ 2016 ಮತ್ತು 2017 ರ ಕಂದಾಯವನ್ನು ಆಸ್ತಿ ಸಂಖ್ಯೆ F-63 ಕ್ಕೆ ಕಟ್ಟಿದ್ದು, ನಿಪಿ.2 ರಿಂದ 7 ರ ದಾಖಲೆಗಳನ್ನು ಆಸ್ತಿ ಸಂಖ್ಯೆ F -69 ಎಂದು ತಿದ್ದಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ F-69 ಆಸ್ತಿಯು ಪ್ರತಿವಾದಿಯ ಸ್ವಾಧೀನಕ್ಕೆ ಹಾಗೂ ವಾಸಕ್ಕೆ ಒಳಪಟ್ಟ ಆಸ್ತಿ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳನ್ನು ತಿದ್ದಿ ಪ್ರತಿವಾದಿ

ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ F -63 ಆಸ್ತಿಯ ಪಶ್ಚಿಮ ದಿಕ್ಕಿಗೆ ಆಸ್ತಿ ಸಂಖ್ಯೆ F -69 ಆಸ್ತಿ ಇದ್ದು ಸದರಿ ಆಸ್ತಿ ಸಂಖ್ಯೆ F -69 ಆಸ್ತಿ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ಸದರಿ ಆಸ್ತಿ ಸಂಖ್ಯೆ F -69 ಆಸ್ತಿಯು ಮೂಲತಃ 1993 ನೇ ಇಸವಿಯಲ್ಲಿ ಸಬಾಸ್ಟಿನ್ ರವರ ಮಗ ಸಂದೇಶ್ ರವರಿಗೆ ಮಂಜೂರಾಗಿದ್ದಂತಹ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸಂದೇಶ್ ರವರಿಗೆ ಹಕ್ಕು ಪತ್ರವನ್ನು ಸಹಾ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದೇಶ್ ರವರು ದಿನಾಂಕ 06.05.1998 ರಲ್ಲಿ ಆಸ್ತಿ ಸಂಖ್ಯೆ F-69 ಆಸ್ತಿಯನ್ನು ಪ್ರತಿವಾದಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 1998 ನೇ ಇಸವಿಯಿಂದ ಇಲ್ಲಿಯವರೆಗೂ ಪ್ರತಿವಾದಿಯೇ ಆಸ್ತಿ ಸಂಖ್ಯೆ F -69 ರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿ ಸಂಖ್ಯೆ F-69 ರಲ್ಲಿ ಸ್ವಾಧೀನದಲ್ಲಿ ಇದ್ದ ಕಾರಣ ಸದರಿ ಸ್ವತ್ತನ್ನು ಪ್ರತಿವಾದಿಗೆ ಪುರಸಬೆರವರು ಪುನಃ ಮಂಜೂರು ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಾಣುವ ಶೀಟಿನ ಮನೆಯ ಪಕ್ಕದಲ್ಲಿ ಇರುವ ಗುಡಿಸಲುಪ್ರತಿವಾದಿಗೆ ಸೇರಿದ್ದು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದರಿ ಫೋಟೋವನ್ನುನೋಡಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ಪ್ರತಿವಾದಿ ಪರವಾಗಿ ನಿಡಿ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.